ಆರನೇ ತಿಂಗಳಿಗೆ ಕಾಲಿಡುವ ಹೊತ್ತಿಗೆ ಗರ್ಭಕ್ಕೆ ಬುದ್ಧಿ, ಬಲ ಮತ್ತು ಚರ್ಮ ಬಣ್ಣ ವೃದ್ಧಿಯಾಗುತ್ತದೆ. ಚರ್ಮದಲ್ಲಿನ 'ಮೆಲನಿನ್' ಎಂಬ ವರ್ಣವಸ್ತುವಿನ ಕಡಿಮೆ ಮತ್ತು ಹೆಚ್ಚು ಪ್ರಮಾಣಗಳು ಕಪ್ಪು ಮತ್ತು ಬಿಳಿ ಬಣ್ಣಕ್ಕೆ ಕಾರಣವಾಗಿದೆ. ಒಟ್ಟಿನಲ್ಲಿ ಶಿಶುವಿನ ಹುಟ್ಟಿನೊಂದಿಗೆ ಬಣ್ಣವೂ ಹುಟ್ಟುತ್ತದೆ.

'ಹೆಣ್ಣಾ, ಗಂಡಾ?' ಅಂತ ಕೇಳುವ ಹಾಗೆ ಮೊಗ 'ಬೆಳ್ಳಗೈತಾ, ಕರ್ರಗೈತಾ ಅಥವಾ ಎಣ್ಣೆಗೆಂಪ' ಅಂತ ಕೇಳುವುದಿದೆ. ಇಂದಿನ ಕಾಲದಲ್ಲಿ ಹೀಗೆ ಪ್ರಶ್ನೆ ಕೇಳುವ ರೀತಿ ಬದಲಾಗಿರಬಹುದು. ಆದರೆ, ಕೇಳುವುದಂತೂ ಗ್ಯಾರಂಟಿ. ಮೈಬಣ್ಣ, ಮೂಗು, ಕಣ್ಣು ಅಪ್ಪನಂಗ, ಅಮ್ಮನಂಗ ಇತ್ಯಾದಿ ಮಾತುಕತೆಗಳು ನಡೆಯುವ ಬೆನ್ನಲ್ಲೇ, ಮಗು ನೋಡಲು ಬಂದವರು, 'ಬಣ್ಣ ನೋಡಿ ಬಿಳಿಯ, ಕರಿಯ, ಕೆಂಪ, ಬಿಳಿಗಿ, ಕರ್ರಿ' ಅಂತೆಲ್ಲಾ ಅಂದು ತಮಾಷೆ ಮಾಡಿದ್ದರ ಫಲ ಮುಂದೊಂದು ದಿನ ಬಿಳಿಯಣ್ಣ, ಬಿಳಿಯಪ್ಪ, ಬಿಳಿಯಯ್ಯ, ಬಿಳಿಯಜ್ಜನಾಗಿ ರೂಪಾಂತರಗೊಂಡ ನೂರಾರು ಉದಾಹರಣೆಗಳಿವೆ. ಇತ್ತೀಚಿನ ಹೆಸರುಗಳಲ್ಲೂ ಬಣ್ಣಗಳನ್ನು ಕಾಣಬಹುದು. ಶ್ವೇತ, ಕಸ್ತೂರಿ, ಗುಲಾಬಿ, ಪಿಂಕಿ, ಜಾಸ್ಮಿನ್, ಸುವರ್ಣ, ನೀಲ, ಹವಳ... ಇತ್ಯಾದಿ.

ಹಸುಮಗು ಬಹುಬೇಗ ಬಿಳಿ ಮತ್ತು ಕಪ್ಪು ಬಣ್ಣವನ್ನು ಪತ್ತೆ ಹಚ್ಚುತ್ತದೆ. ಈ ಮೂಲಕ ಅದು ಬಣ್ಣದ ಲೋಕಕ್ಕೆ ಕಾಲಿಡುತ್ತದೆ ಎಂದರ್ಥ. 'ಆ ಕಾಲವೊಂದಿತ್ತು ಬಾಲ್ಯವಾಗಿತ್ತು...' ಎಂಬಂತೆ ಮಗುವಿನ ಬಾಲ್ಯ ಬಣ್ಣಮಯವಾಗಿರುತ್ತದೆ. ತೊಡಿಸುವ ಬಟ್ಟೆಗಳಲ್ಲಿ ಅಮ್ಮಂದಿರು ಹೇಳುವ ಕಥೆಗಳಲ್ಲಿ ಬಣ್ಣವೇ ಪ್ರಧಾನ. ಮನೆಯ ಸುತ್ತಮುತ್ತ ಅರಳುವ ಹೂವುಗಳಲ್ಲಿ, ಸುಳಿದಾಡುವ ಚಿಟ್ಟೆಗಳಲ್ಲಿ, ಹಾರಾಡುವ ಹಕ್ಕಿಗಳಲ್ಲಿ ತರತರದ ಬಣ್ಣಗಳನ್ನು ಕಾಣುವ ಮಗು ಶಾಲೆಗೆ ಕಾಲಿಟ್ಟೊಡನೆ ಸಮವಸ್ತ್ರದ ಬಣ್ಣ ರಾಷ್ಟ್ರಧ್ವಜದಲ್ಲಿನ ಕೇಸರಿ, ಬಿಳಿ, ಹಸಿರು ಬಣ್ಣ ನಾಡಧ್ವಜದ ಕೆಂಪು, ಹಳದಿ ಬಣ್ಣ ಮಗುವನ್ನು ಬೆರಗುಗೊಳಿಸುತ್ತದೆ. ಬಣ್ಣದ ಪೆನ್ಸಿಲ್‌ಗಳು ಚಿತ್ರ ಬರೆಸುತ್ತವೆ.



ಕಪ್ಪುಬಣ್ಣದ ಬೋರ್ಡ್‌ನ ಮುಂದೆ ಬಿಳಿ ಬಣ್ಣದ ಸೀಮೆಸುಣ್ಣ ಹಿಡಿದು ನಿಲ್ಲುವ ಶಿಕ್ಷಕರು, ಪುಸ್ತಕದ ಹಾಳೆ ತೆಗೆದು ಮಕ್ಕಳಿಗೆ ಹೇಳಿಕೊಡುವ ಪದ್ಯದಲ್ಲಿಯೂ ಬಣ್ಣವೇ ಮಕ್ಕಳ ಮನಸ್ಸನ್ನು ಗೆಲ್ಲುತ್ತದೆ. 'ಬಣ್ಣದ ತಗಡಿನ ತುತ್ತೂರಿ ಕಾಸಿಗೆ ಕೊಂಡನು ಕಸ್ತೂರಿ' ಎಂದು ಪದ್ಯ ಪ್ರಾರಂಭಿಸುವ ಗುರುಗಳು. ಮುಂದುವರಿದು ಕಸ್ತೂರಿ ಎಂಬ ಹೆಸರಿನ ಬಾಲಕ ತುತ್ತೂರಿಯನ್ನು ಕೊಂಡು ಜಂಬದಿಂದ ಊದುತ್ತಾ, ಕೊಳದ ಬಳಿಗೆ ಹೋಗುತ್ತಾನೆ. ಬಣ್ಣದ ತುತ್ತೂರಿ ಕೈಜಾರಿ ನೀರಿಗೆ ಬೀಳುತ್ತದೆ.

**'ಬಣ್ಣವು ನೀರಿನ ಪಾಲಾಯ್ತು**
**ಬಣ್ಣದ ತುತ್ತೂರಿ ಬೋಳಾಯ್ತು**
**ಜಂಬದ ಕೋಳಿಗೆ ಗೋಳಾಯ್ತು'**

ಮಕ್ಕಳೇ, ಈ ಪದ್ಯದ ನೀತಿ ಎಂದರೆ ಮಕ್ಕಳು ಜಂಬ ಪಡಬಾರದು ಎನ್ನುತ್ತಾರೆ. ಮಕ್ಕಳಿಗೆ ಬಣ್ಣದ ತುತ್ತೂರಿ ಬೋಳಾಯಿತಲ್ಲ ಅಂತ ಬೇಸರವಾದಾಗ ಗುರುಗಳು ಮುಂದಿನ ಪುಟ ತೆಗೆದು

**'ಕಾಮನಬಿಲ್ಲು ಕಮಾನು ಕಟ್ಟಿದೆ**
**ಮೋಡದ ನಾಡಿನ ಬಾಗಿಲಿಗೆ**
**ಬಣ್ಣಗಳೇಳನು ತೋರಣ ಮಾಡಿದೆ**
**ಕಂದನ ಕಣ್ಣಿಗೆ ಚಂದವ ನೀಡಿದೆ'**

ಅಂತ ರಾಗವಾಗಿ ಹಾಡಿ ಕೆಂಪು, ಕೇಸರಿ, ಹಳದಿ, ಹಸುರು, ನೀಲಿ, ಇಂಡಿಗೋ, ನೇರಳೆ ಬಣ್ಣಗಳನ್ನು ಪರಿಚಯಿಸುತ್ತಾರೆ. ಅಂದಿಗೂ ಇಂದಿಗೂ ಮಕ್ಕಳ ಬಾಲ್ಯಕ್ಕೆ ಬಣ್ಣವೇ ನವಿಲುಗರಿ. ಮಿರಿಮಿರಿ ಮೆರುಗು. ದಿನ ಕಳೆದಂತೆಲ್ಲಾ ಮಕ್ಕಳು ಬದಲಾಗುತ್ತಾರೆ. ವಯಸ್ಸಿಗನುಗುಣವಾಗಿ ಜೀವಿತದ ನಾನಾ ಸಂದರ್ಭಗಳಲ್ಲಿ ಮೈಬಣ್ಣವೂ ಬದಲಾಗುತ್ತದೆ. ದೈಹಿಕ ಬಣ್ಣ ಬದಲಾಗುವಂತೆ ಮಾನಸಿಕ ಬಣ್ಣವೂ ಬದಲಾಗುತ್ತದೆ. ಆಗಾಗ ಬಣ್ಣ ಬಯಲಾಗುವುದೂ ಇದೆ. ಕೇಳುವ ಹಾಡು ಬದಲಾಗುತ್ತದೆ. ಏಳು ಸ್ವರವು ಸೇರಿ ಸಂಗೀತವಾಯಿತು ಏಳು ಬಣ್ಣ ಸೇರಿ ಬಿಳಿಯ ಬಣ್ಣವಾಯಿತು ಎಂಬ ಅಮ್ಮನ ಹಳೇ ಕಾಲದ ಹಾಡಿಗೆ ಬದಲಾಗಿ 'ಬಣ್ಣಾ ನನ್ನ ಒಲವಿನ ಬಣ್ಣ ನನ್ನ ಬದುಕಿನ ಬಣ್ಣ...' ಬಣ್ಣಗಳ ಓಕುಳಿಯಲ್ಲಿ ಮಿಂದೇಳುವ ನಾಯಕ, ನಾಯಕಿ ಕಣ್ಣಿಗೆ ಕಟ್ಟುತ್ತಾರೆ ಇದುವೇ ಯೌವ್ವನದ ಕಾಲ. ನಾಯಕನ ಬಣ್ಣ ಹೇಗೆ ಬಯಲಾಯಿತು ಎಂಬುವುದು ಸಿನಿಮಾ ನೋಡಿದವರಿಗೆ ಗೊತ್ತು. ಮುಂದೆ ಒಂದು ದಿನ